## ಬೆಕ್ಕು ಮತ್ತು ಚಟರ್ಜಿ

ರಾಮಾನುಜನ್ ತಮ್ಮ ಗೆಳೆಯ ಚಟರ್ಜಿಯೊಂದಿಗೆ ಲಂಡನ್‌ನ ಬಹು ಮಹಡಿ ಕಟ್ಟಡದ ಕೋಣೆಯೊಂದರಲ್ಲಿ ಬಾಡಿಗೆಗೆ ಇದ್ದರು. ರಾತ್ರಿಯ ಊಟಕ್ಕೆ ಕೆಳಗಿಳಿದು ಬರಬೇಕಾಗುತ್ತಿತ್ತು. ಒಂದು ಬಾರಿ, ರಾತ್ರಿಯೂಟವನ್ನು ಬೇಗ ಮುಗಿಸಿ, ಗಣಿತದ ಸಮಸ್ಯೆಗಳನ್ನು ಬಿಡಿಸಿದರಾಯಿತು ಎಂದು ಕೋಣೆಗೆ ತೆರಳಿ ಕೂಡಲೇ ಹಿಂತಿರುಗಿ ಬಂದರು. ಇವರ ವರ್ತನೆಯನ್ನು ಗಮನಿಸಿದ ಚಟರ್ಜಿ: 'ಏಕೆ, ಏನಾಯಿತು?' ಎಂದರು.

'ಹಾಸಿಗೆಯ ಮೇಲೆ ಬೆಕ್ಕು ಕುಳಿತಿದೆ.'

'ಓಡಿಸಬೇಕಿತ್ತು.'

'ಪ್ರಯತ್ನಿಸಿದೆ. ಅದು ಹೋಗಲಿಲ್ಲ.'

ಊಟ ಮುಗಿಸಿ ಎದ್ದು ಬಂದ ಚಟರ್ಜಿ, ಹಾಸಿಗೆಯ ಮೇಲೆ ಕುಳಿತಿದ್ದ ಬೆಕ್ಕಿನ ಮೇಲೆ ದಿನಪತ್ರಿಕೆಯನ್ನು ಸುರುಳಿ ಮಾಡಿ ಎಸೆದರು. ಆಗಲೂ ಬೆಕ್ಕು ಕದಲಲಿಲ್ಲ. ಕೊನೆಗೆ ಮನೆಯೊಡತಿಯನ್ನು ಕರೆದು ಹೀಗೆ ಎಂದು ವಿವರಿಸಿದರು.

ಇವರನ್ನು ವಿಚಿತ್ರವಾಗಿ ನೋಡಿದ ಆಕೆ, 'ಎಂಥ ಜನವಯ್ಯಾ ನೀವು' ಎಂದವಳೇ ನೇರ ಹಾಸಿಗೆಗೆ ನಡೆದು, ಬೆಕ್ಕಿನ ಕುತ್ತಿಗೆ ಹಿಡಿದು ಹೊರಗೆಸೆದು, 'ಈಗ ಸರಿಯಾಯಿತೆ' ಎಂದಳು. ಇಬ್ಬರೂ ಶುಭರಾತ್ರಿ ಎಂದು ನಿಟ್ಟುಸಿರು ಬಿಟ್ಟರು.

## ಹುಡುಗಾಟ ಮತ್ತು ಹುಡುಕಾಟ

ಹೇಳದೆ ಕೇಳದೆ ಮನೆಬಿಟ್ಟು ಹೋಗುವ ಗುಣವೂ ರಾಮಾನುಜನ್ ಅವರಲ್ಲಿತ್ತು. ಒಮ್ಮೆ ದೂರದ ವಿಶಾಖಪಟ್ಟಣಕ್ಕೆ, ಮತ್ತೊಮ್ಮೆ ವಿಜಯವಾಡದವರೆಗೂ ಓಡಿಹೋಗಿದ್ದರು. ಮದ್ರಾಸಿನ ಮನೆಯ ಆಸುಪಾಸಿನ ಮನೆಗಳಲ್ಲೆಲ್ಲಾ ಹುಡುಕಾಡಿ ಸಿಗದೆ ಕೊನೆಗೆ ಪೇಪರಿನಲ್ಲಿ ಜಾಹೀರಾತು ನೀಡಲಾಯಿತು. ಪೊಲೀಸ್ ದೂರನ್ನು ನೀಡುವ ವೇಳೆಗೆ ಅವರೇ ಹಿಂತಿರುಗಿ ಬಂದರು. ಇದು ಜರುಗಿದ್ದು 1905ರಲ್ಲಿ. ಇದು ಹೀಗೇ ಬಿಟ್ಟರೆ ಅತಿರೇಕಕ್ಕೆ ಹೋಗಬಹುದೆಂದರಿತು ಜಾನಕಿಯೊಂದಿಗೆ ಮದುವೆ ಮಾಡಿದರು. ಕೆಲ ವರ್ಷಗಳ ನಂತರ ಇಂಗ್ಲೆಂಡಿಗೆ ಹೊರಟು ನಿಂತಾಗ ವಿಮಾನ ನಿಲ್ದಾಣಕ್ಕೆ ಬಂದಿದ್ದ ಹೆಂಡತಿ ಜಾನಕಿ 'ನಾನೂ ಬರುತ್ತೇನೆ' ಎಂದು ಹಟ ಮಾಡಿದಾಗ, 'ನೀನು ತುಂಬಾ ಸುಂದರವಾಗಿದ್ದೀಯ. ಅಲ್ಲಿ ನಿನ್ನನ್ನು ಯಾರಾದರೂ ಹಾರಿಸಿಕೊಂಡು ಹೋಗಿಬಿಟ್ಟರೆ ಏನು ಗತಿ?' ಎಂದು ಕೇಳಿದ್ದಕ್ಕೆ, ಪತಿಯನ್ನು ಅಗಲಿರಬೇಕಲ್ಲಾ ಎಂಬ ದುಃಖದಲ್ಲಿ ಅಳುತ್ತಿದ್ದ ಜಾನಕಿ ಅವರಿಗೆ ಮುಂದೆ ಅಳಲು ಮರೆತೇ ಹೋಯಿತಂತೆ.

'ನನಗೆ ಶವಸಂಸ್ಕಾರವಿಲ್ಲ ನಾನು ಸತ್ತ ನಂತರ ನನ್ನ ಶವಸಂಸ್ಕಾರ ವಿಧಿವತ್ತಾಗಿ ನಡೆಯಲಾರದು' ಎಂದು ರಾಮಾನುಜನ್ ತಮ್ಮ ಜೀವನದ ಕೊನೆಯ ದಿನಗಳಲ್ಲಿ ಇಂಗ್ಲೆಂಡಿನ ಗಣಿತಜ್ಞ ಸ್ನೇಹಿತ ಹೆರಾಲ್ಡ್‌ನೆವಿಲ್ಲಿಗೆ ಹೇಳಿದ್ದರು. ಸಂಪ್ರದಾಯಸ್ಥ ಅಯ್ಯಂಗಾರ್ ಬ್ರಾಹ್ಮಣ ಕೋಮಿನಲ್ಲಿ ಜನಿಸಿದ್ದ ರಾಮಾನುಜನ್, ಸಾಗರ ದಾಟಿ ವಿದೇಶ ಪ್ರಯಾಣ ಮಾಡಿದ್ದು ಅಂದಿನ ಭಾರತದ ಬ್ರಾಹ್ಮಣ ಸಂದರ್ಭಗಳಿಗೆ ತೀರಾ ವ್ಯತಿರಿಕ್ತವಾಗಿತ್ತು. ಸ್ವತಂತ್ರ ಪೂರ್ವ ಭಾರತದಲ್ಲಿ ಸಂಪ್ರದಾಯಸ್ಥ ಬ್ರಾಹ್ಮಣರು ಸಾಗರ ಪಯಾಣ ಮಾಡುವಂತಿರಲಿಲ್ಲ. ಹಾಗೇನಾದರೂ ಮಾಡಿದರೆ ಜಾತಿಭ್ರಷ್ಟರಾಗುತ್ತಿದ್ದರು. ಸಮುದ್ರ ಪ್ರಯಾಣ ಮಾಡಿ ವಿದೇಶಕ್ಕೆ ಹೋಗುವುದು ರಾಮಾನುಜನ್ ತಾಯಿ ಕೋಮಲತ್ತಮ್ಮಾಳ್‌ಗೂ ಇಷ್ಟವಿರಲಿಲ್ಲ. ಆದರೆ ಆಕೆಗೆ ಬಿದ್ದ ಕನಸಿನಲ್ಲಿ, ತನ್ನ ಮಗ ವಿದೇಶದಲ್ಲಿ ಅಪಾರ ಖ್ಯಾತಿಗಳಿಸುವ ದೃಶ್ಯ ಕಂಡುಬರುವುದರಿಂದ ಆಕೆ ರಾಮಾನುಜನ್‌ರ ವಿದೇಶ ಪ್ರಯಾಣಕ್ಕೆ ಅಡ್ಡಿ ಬರಲಿಲ್ಲ. ರಾಮಾನುಜನ್ ಭಾರತಕ್ಕೆ ಹಿಂದಿರುಗಿ ಬಂದು 1920ರಲ್ಲಿ ಮರಣ ಹೊಂದಿದಾಗ, ರಾಮಾನುಜನ್ ಅಂದುಕೊಂಡಂತೆ ಯಾವುದೇ ಕ್ರಿಯಾಕರ್ಮ ಮಾಡದೆ ಅವರ ಶವ ಸಂಸ್ಕಾರ ಮಾಡಲಾಯಿತು.



## ರಾಮಾನುಜನ್ ಭಾವಚಿತ್ರಗಳು

ನಮಗೆ ಲಭ್ಯವಿರುವ ರಾಮಾನುಜನ್ ಫೋಟೋಗಳ ಸಂಖ್ಯೆ ಕೇವಲ ನಾಲ್ಕು. ಎರಡು ಗ್ರೂಪ್ ಫೋಟೋಗಳು, ಒಂದು ನಮಗೆಲ್ಲ ಚಿರಪರಿಚಿತವಾಗಿರುವ – ಭಾರತ ಸರ್ಕಾರ ಅಂಚೆ ಇಲಾಖೆಯ ಸ್ಟಾಂಪ್ ಮೇಲೆ ಮುದ್ರಿಸಿರುವ ಪಾಸ್‌ಪೋರ್ಟ್ ಅಳತೆಯ ಚಿತ್ರ. ಮತ್ತೊಂದು ಕಲಾವಿದನೊಬ್ಬ ಬರೆದ ತೈಲಚಿತ್ರ. ಸ್ಟಾಂಪಿನ ಮೇಲಿನ ಫೋಟೋ ನಮಗೆ ಸಿಗಲು ಕಾರಣ ಖ್ಯಾತ ನಕ್ಷತ್ರ ವಿಜ್ಞಾನಿ, ನೊಬೆಲ್ ವಿಜೇತ ಚಂದ್ರಶೇಖರ್.

ರಾಮಾನುಜನ್ ಮರಣಾನಂತರ, 1936ರಲ್ಲಿ ನಡೆಯಲಿದ್ದ ಹಾರ್ವರ್ಡ್ ವಿ.ವಿ.ಯ ವಿಜ್ಞಾನ ಮತ್ತು ಕಲಾ ವಿಭಾಗದ ತ್ರಿಶತಮಾನೋತ್ಸವದಲ್ಲಿ ಹಾರ್ಡಿ, ರಾಮಾನುಜನ್ ಕುರಿತು ಪ್ರಬಂಧ ಮಂಡಿಸಿ ನಂತರ ಅದನ್ನೇ ಪುಸ್ತಕ ರೂಪದಲ್ಲಿ ತರುವ ಉದ್ದೇಶವಿತ್ತು. ಪುಸ್ತಕದಲ್ಲಿ ಮುದ್ರಿಸಲು ರಾಮಾನುಜನ್‌ರ ಸರಿಯಾದ ಫೋಟೋ ಹಾರ್ಡಿ ಅವರ ಬಳಿ ಇರಲಿಲ್ಲ. ಇದ್ದ ಫೋಟೊದಲ್ಲಿ ಟೋಪಿ ಮತ್ತು ಗೌನು ಹಾಕಿಕೊಂಡ ರಾಮಾನುಜನ್ ಅಂದವಾಗಿ ಕಾಣುತ್ತಿರಲಿಲ್ಲ. ಹೀಗಾಗಿ ಚಂದ್ರಶೇಖರರನ್ನು ಸಂಪರ್ಕಿಸಿದ ಹಾರ್ಡಿ, 'ರಾಮಾನುಜನ್‌ರ ಫೋಟೋ ಸಿಗಬಹುದೇ?' ಎಂದರು. ಆಗ ಭಾರತದಲ್ಲಿದ್ದ ಚಂದ್ರಶೇಖರ್, ರಾಮಾನುಜನ್ ಪತ್ನಿ ಜಾನಕಿ ಅಮ್ಮಾಳ್‌ರನ್ನು ಕಂಡು ಸಂದರ್ಭವನ್ನು ವಿವರಿಸಿ, 'ಹಾರ್ಡಿಯವರಿಗೆ ರಾಮಾನುಜನ್‌ರ ಫೋಟೋ ಬೇಕಿದೆ' ಎಂದಾಗ, ಹಾರ್ಡಿಯ ಬಗ್ಗೆ ಅಪಾರ ಅಭಿಮಾನ–ಗೌರವ ಹೊಂದಿದ್ದ ಜಾನಕಿ ಅಮ್ಮಾಳ್ ತಮ್ಮ ಬಳಿ ಇದ್ದ ಒಂದೇ ಒಂದು ಫೋಟೋವನ್ನು ಚಂದ್ರಶೇಖರ್‌ಗೆ ನೀಡಿದರು. ಅದು 1919ರಲ್ಲಿ ಇಂಗ್ಲೆಂಡಿನಲ್ಲಿ ತೆಗೆಸಿಕೊಂಡ ಫೋಟೋ. ಈಗ ನಮಗೆಲ್ಲ ಲಭ್ಯವಿರುವ ರಾಮಾನುಜನ್‌ರ ಏಕೈಕ ಸುಂದರ ಫೋಟೋ ಅದೊಂದೆ. ಅದು ಸಿಕ್ಕಾಗ ಹಾರ್ಡಿ, ಇದರಲ್ಲಿ ಅವರ ಅನಾರೋಗ್ಯ ಎದ್ದುಕಂಡರೂ ಆತ ಜೀನಿಯಸ್ ಎಂಬುದು ಅಷ್ಟೇ ನಿಖರವಾಗಿ ಕಾಣುತ್ತಿದೆ ಎಂದರಂತೆ.

## ಆತ್ಮಹತ್ಯೆಯ ಪ್ರಯತ್ನ

ಇಂಗ್ಲೆಂಡಿನಲ್ಲಿದ್ದಾಗ ಅಲ್ಲಿನ ಹವೆ ಹೊಂದದೆ, ಊಟ ಸರಿಯಾಗದೆ ಒದ್ದಾಡುತ್ತಿದ್ದ ರಾಮಾನುಜನ್ ಕಿರಿಯ ವಯಸ್ಸಿನ ಹೆಂಡತಿಯನ್ನು ಭಾರತದಲ್ಲಿ ಬಿಟ್ಟು ಬಂದದ್ದರಿಂದ ತೀವ್ರ ಮನೋಖಿನ್ನತೆಗೆ ಒಳಗಾಗಿದ್ದರು. ಅವರು ಬರೆದ ಪತ್ರಗಳೊಂದಕ್ಕೂ ಮಡದಿ ಜಾನಕಿಯಿಂದ ಉತ್ತರ ಬರುತ್ತಿರಲಿಲ್ಲ. ಅದಕ್ಕೆ ಕಾರಣ ಆ ಪತ್ರಗಳು ಆಕೆಯನ್ನು ತಲುಪದಂತೆ ರಾಮಾನುಜನ್ ತಾಯಿ ಕೋಮಲತ್ತಮ್ಮಾಳ್ ನೋಡಿಕೊಂಡಿದ್ದರು. ಅಲ್ಲದೆ ಜಾನಕಿ ಬರೆದ ಪತ್ರಗಳಾವುವನ್ನೂ ರಾಮಾನುಜನ್‌ಗೆ ಕಳಿಸದೆ ದಂಪತಿಗಳ ನಡುವಿನ ಅನ್ಯೋನ್ಯತೆಯನ್ನು ಹಾಳುಮಾಡಿದ್ದರು. ಇದರಿಂದ ನೊಂದ ರಾಮಾನುಜನ್ ಇಂಗ್ಲೆಂಡಿನ ಭೂಗತ ರೈಲಿಗೆ ತಲೆಕೊಡಲು ಮುಂದಾದರು. ಆಕಸ್ಮಿಕವೆಂಬಂತೆ ರೈಲ್ವೆಗಾರ್ಡ್‌ನ ಎಚ್ಚರದಿಂದ ಬದುಕುಳಿದಿರು. ವಿಷಯ ತಿಳಿದ ಸ್ಕಾಟ್ಲೆಂಡ್ ಯಾರ್ಡ್‌ನ ಪೋಲೀಸರು ರಾಮಾನುಜನ್‌ರನ್ನು ಬಂಧಿಸಿದರು. ಹಾರ್ಡಿ ಅವರು ಮಧ್ಯ ಪ್ರವೇಶಿಸಿ, 'ರಾಮಾನುಜನ್ ರಾಯಲ್ ಸೊಸೈಟಿಯ ಫೆಲೋ' ನೀವು ಅವರನ್ನು ಬಂಧಿಸಲು ಕಾನೂನಿನಲ್ಲಿ ಅವಕಾಶವಿಲ್ಲ' ಎಂದು ವಾದಿಸಿ ಬಿಡುಗಡೆ ಮಾಡಿಸಿದರು ಎನ್ನುವುದು ಚಾಲ್ತಿಯಲ್ಲಿರುವ ಜನಪ್ರಿಯ ಕಥನ. ಆದರೆ ನಡೆದದ್ದೇ ಬೇರೆ. ರಾಮಾನುಜನ್ 'ಎಫ್‌ಆರ್‌ಎಸ್' ಆಗುವುದಕ್ಕೆ ಕೇವಲ ಹದಿನೆಂಟು ದಿನಗಳಷ್ಟೇ ಬಾಕಿ ಇರುತ್ತದೆ. ಹಾಗಾಗಿ ಪೊಲೀಸರು ಎಫ್‌ಐಆರ್ ಹಾಕದೆ ಹೋದರೂ, ಹಾರ್ಡಿಯ ಮಾತಿಗೆ ಮಣಿದು ಸುಮ್ಮನೇ ಬಿಟ್ಟು ಕಳಿಸುವುದಿಲ್ಲ. 'ನಿಮ್ಮ ಮಿತ್ರನ ಮಾನಸಿಕ ಆರೋಗ್ಯ ಸರಿಯಿಲ್ಲ, ಆತ ಆಸ್ಪತ್ರೆಗೆ ದಾಖಲಾಗಿ ಒಂದು ವರ್ಷದವರಿಗೆ ಚಿಕಿತ್ಸೆ ಪಡೆಯಲೇಬೇಕು' ಎಂಬ ಷರತ್ತು ವಿಧಿಸಿ ಬಂಧಮುಕ್ತಗೊಳಿಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in